೩

ಖುಷಿ ಓದಿಗಾಗಿ....

# ಕಥಾ ಮಂಟಪ

ಇಲ್ಲಿನ ಕಥೆಗಳನ್ನು ನೀವೂ ಓದಿರಿ;
ಬೇರೆಯವರಿಗೂ ಓದಿ ಹೇಳಿರಿ.



ಆಗಸ್ಟ್–ಸೆಪ್ಟೆಂಬರ್ ೨೦೧೯–೨೦

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಆರಂಭ ಯೋಜನೆ
Arambha 2019-20 Project
is Supported by Many
Individual Donors

ಈ ಸಲದ

# ಕಥೆಗಳು......

* ಸೇರಿಗೆ ಸವ್ವಾಸೇರು – ೩

* ಅತಿಆಸೆ ಬೇಡ – ೧೦

* ವಂಶೋದ್ಧಾರಕ – ೧೬

* The Fruits and Vegetables – ೨೩

# ಸೇರಿಗೆ ಸವ್ವಾಸೇರು



**ಒಂ**ದ್ಸಲ ಅಷ್ಟಮಿಗೆ ಅಜ್ಜಿ ಕೊಬ್ಬರಿ ಲಾಡು ಮಾಡಿದ್ದಳು. ಕೊಬ್ಬರಿ ತುರಿದು, ತುಪ್ಪ ಹಾಕಿ, 'ಘಮ್' ಅಂತ ಹುರಿದು, ಅದಕ್ಕೆ ಗೇರುಬೀಜ, ಒಣದ್ರಾಕ್ಷಿ ಸೇರಿಸಿ, ಹದವಾಗಿ ಬೆಲ್ಲದ ಪಾಕ ಸುರಿದು ಉಂಡೆಗಳನ್ನು ಕಟ್ಟಿದಳು.

ಕಟ್ಟಿದ ಉಂಡೆಗಳನ್ನು ಬಿಸಿ ಆರಲಿ ಅಂತ ಒಂದು ತಟ್ಟೆಯಲ್ಲಿ ಜೋಡಿಸುತ್ತಿದ್ದಳು. ಆಗ ಒಂದು ಲಾಡು ಉರುಳುರುಳಿ ಕೆಳಗೆ ಬಿತ್ತು. ಬಿದ್ದು ಸುಮ್ಮನಿರಲಿಲ್ಲ. ಉರುಳುತ್ತಲೇ ಹೋಯ್ತು. ಅದು ಕೈಗೆ ಸಿಗಲೇ ಇಲ್ಲ. ಅಷ್ಟೇ

ಅಲ್ಲ, ‘ಕೀ...ಕೀ...ಕೀ...’ ಅಂತ ಕೇಕೆ ಹಾಕ್ತಾ ಹೋಯ್ತು. ಹೋದರೆ ಹೋಗಲಿ ಅಂತ ಅಜ್ಜಿ ಸುಮ್ಮನಾದಳು.

ಗಡಗಡಾಂತ ಆ ಲಾಡು ಹೋಗಿ, ಎದುರಿಗೆ ಕೊಟ್ಟಿಗೇಲಿ ಇದ್ದ ಹಸುವಿನ ಹತ್ತಿರ ಹೋಯಿತು. “ಆಹಾ! ಎಂಥ ಸ್ವಾದಿಷ್ಟ ಲಾಡು” ಅಂದುಕೊಂಡು ಹಸು ಬಾಯಿ ಹಾಕಲು ಹೋಯಿತು. ಲಾಡು ಮತ್ತೆ ಛಂಗಂತ ಹಾರಿ, “ನಾನೇನೂ ನಿನ್ನ ಕೈಗೆ ಸಿಗುವವನಲ್ಲ. ಅಜ್ಜಿ ಕೈಗೆ ಸಿಗಲಿಲ್ಲ. ಇನ್ನು ಇನ್ನ ಬಾಯಿಗೆ ಸಿಗತೀನಾ... ಕೀ.ಕೀ.ಕೀ..” ಅಂತ ಮುಂದೆ ಹೋಯ್ತು.

ಅಷ್ಟರಲ್ಲಿ ಲಾಡು ಒಂದು ಕಾಗೆಯ ಕಣ್ಣಿಗೆ ಬಿತ್ತು. ಕಾಗೆ ಹಾರಿ ಬಂದು ಕೊಕ್ಕಿನಿಂದ ಕುಕ್ಕಲು ನೋಡಿತು. ಊಹುಂ, ಲಾಡು ಅದರ ಕೊಕ್ಕಿಗೂ ಸಿಗಲಿಲ್ಲ. ‘ಗಡಗಡ’ ಅಂತ ಉರುಳತ್ತ

– “ನಾನೇನೂ ನಿನ್ನ ಕೊಕ್ಕಿಗೆ ಸಿಗೋನಲ್ಲ, ಅಜ್ಜಿ ಕೈಗೆ ಸಿಗಲಿಲ್ಲ, ಹಸುವಿನ ಬಾಯಿಗೆ ಸಿಗಲಿಲ್ಲ. ಕಾಗೇ ಕೊಕ್ಕಿಗೆ ಸಿಗಲಿಲ್ಲ. ಕೀ.ಕೀ.ಕೀ..” ಅಂತ ಕೇಕೆ ಹಾಕಿಕೊಂಡು ಮುಂದೆ ಹೋಯ್ತು. ಹೋದರೆ ಹೋಗಲಿ ಅಂತ ಕಾಗೆ ಹಾರಿ ಹೋಯ್ತು.

ಲಾಡು ಈಗ ಅಹಂಕಾರದಿಂದ ಉಬ್ಬಿತು. “ನಾನೂ ಭಾರೀ ಭಾರೀ ಬುದ್ಧಿವಂತ. ಯಾರ ಕೈಗೂ ಸಿಗದೇ ಹಾರೋದು ತನ್ನಿಂದ ಮಾತ್ರ ಸಾಧ್ಯ” ಅಂತ ಬೀಗಿತು. ಹೀಗೆ ಹೋಗ್ತಾ ಹೋಗ್ತಾ ಒಂದು ನಾಯಿ ಎದುರಾಯ್ತು.

ಲಾಡು ಕಂಡಾಗ ಅದರ ಬಾಯಲ್ಲೂ ನೀರೂರಿತು. “ಇವತ್ತು ಯಾರ ಮುಖ ನೋಡಿ ಎದ್ದೆನೋ  ಇಂಥ ನವಿರಾದ ರುಚಿರುಚಿ ಉಂಡೆ ನನ್ನ ಕಡೆಗೇ ಬರ್ತಾ ಇದೆ” ಅಂತ

ಅಂದುಕೊಂಡು ಬಾಯಿ ಹಾಕಲು ಹೋಯ್ತು. ಲಾಡು ಅದರ ಬಾಯಿಗೂ ಸಿಗಲಿಲ್ಲ. ಮತ್ತೆ ಛಂಗನೆ ಹಾರಿ 'ಕೀ.ಕೀ..' ಅಂತ ನಗಲು ಶುರು ಮಾಡಿತು.

ಲಾಡು – "ಅಜ್ಜಿ ಕೈಗೆ ಸಿಗಲಿಲ್ಲ. ಹಸುವಿನ ಬಾಯಿಗೆ ಸಿಗಲಿಲ್ಲ, ಕಾಗೆ ಕೊಕ್ಕಿಗೆ ಸಿಗಲಿಲ್ಲ, ನಾಯಿ ಹಲ್ಲಿಗೆ ಸಿಗಲಿಲ್ಲ. ಕೀ.ಕೀಕೀ." ಅನ್ನುತ್ತಿದ್ದರೆ ನಾಯಿ ಪಿಳಿಪಿಳಿ ಅಂತ ಕಣ್ಣುಕಣ್ಣು ಬಿಟ್ಟುಕೊಂಡು ನೋಡುತ್ತಿತ್ತು. "ಅಯ್ಯೋ ಗಮಗಮಿಸೋ ಲಾಡು, ತುಪ್ಪದ ಲಾಡು, ಕೊಬ್ಬರಿ ಲಾಡು, ನನಗೆ ಸಿಗಲಿಲ್ಲವಲ್ಲಪ್ಪ" ಎಂದು ಹಳಹಳಿಸುತ್ತ ನಿಂತುಬಿಟ್ಟಿತು.

ಹೀಗೆ ಎಗರಾಡುತ್ತ, ಜಿಗಿದಾಡುತ್ತ ಲಾಡು ಜಂಭದಿಂದ ಮುಂದೆ ಮುಂದೆ ಹೋಗುತ್ತಿರಬೇಕಾದರೆ ಅದಕ್ಕೆ ಒಂದು ಮನೆ

ಕಾಣಿಸಿತು. ಆ ಮನೆಯ ಮುಂದುಗಡೆ ಒಬ್ಬ ಹುಡುಗ ಆಡುತ್ತ ಕುಳಿತಿದ್ದ. ಈ ಜಂಬದ ಲಾಡು ಸುಮ್ಮನಿರಲಾರದೆ, ಹುಡುಗನ ಮುಂದೆ ಹೋಗಿ ಕುಣಿಯಲಾರಂಭಿಸಿತು. ಲಾಡುವನ್ನು ನೋಡಿದ ಹುಡುಗ ಅದನ್ನು ಹಿಡಿಯಲು ಹೋದನು.

ಲಾಡು ಅವನಿಂದ ತಪ್ಪಿಸಿಕೊಂಡು ಮುಂದೆ ಓಡಲು ಅನುವಾಯಿತು. ಆಗ ಹುಡುಗನ ತಲೆಯಲ್ಲಿ ಏನೋ ಹೊಳೆದಂತಾಯಿತು. ಅವನು ಸ್ವಲ್ಪ ದೂರಸರಿದು ನಿಂತು ಲಾಡುವನ್ನು ಬಹಳ ದೈನ್ಯದಿಂದ ನೋಡತೊಡಗಿದನು.

ಇದರಿಂದ ಲಾಡು ಸ್ವಲ್ಪ ಗೊಂದಲಕ್ಕೆ ಒಳಗಾಯಿತು. ಇದೇ ಸಂದರ್ಭವನ್ನು ಬಳಸಿಕೊಂಡ ಹುಡುಗ "ಅಲ್ಲ ಕಣೋ ಲಾಡು ಅಣ್ಣ ನಾನೂ ಒಬ್ಬನೇ ಇದ್ದೀನಿ, ನೀನೂ ಕೂಡ

ಒಬ್ಬನೇ ಇದ್ದೀಯಾ ನಾವ್ಯಾಕೆ ಇಬ್ಬರೂ ಸೇರಿ ಆಟ ಆಡಬಾರದು? ಎಂದನು.

ಹುಡುಗನ ಮಾತನ್ನು ಕೇಳಿದ ಲಾಡು, ತಾನು ಬಹಳ ಬುದ್ಧಿವಂತನೆಂದು ತೋರಿಸಿಕೊಳ್ಳುತ್ತ "ನೀನು ಇಷ್ಟು ಅಂಗಲಾಚಿ ಕರೀತಿದ್ದೀಯಾ ಅಂದ ಮೇಲೆ ನಾನು ಹಾಗೆ ಹೋಗೋದು ಚೆನ್ನಾಗಿರಲ್ಲ. ಆಯ್ತು ಬಿಡು ಬರ್ತೀನಿ, ಬಾ ಆಡೋಣ" ಎಂದು ಗುಡುಗುಡು ಉರುಳುತ್ತ ಹುಡುಗನ ಹತ್ತಿರ ಬಂದು ನಿಂತಿತು.

ಹುಡುಗ ತಕ್ಷಣವೇ ಬಗ್ಗಿ ಆ ಲಾಡುವನ್ನು ತನ್ನ ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡನು. ಅವನು ಹಿಡಿದ ರಭಸಕ್ಕೆ ಆ ಲಾಡು ಒಡೆದು ಎರಡು ಭಾಗವಾಯಿತು.

ಆಗ ಹುಡುಗ ನಗುತ್ತ "ಏನು ಲಾಡು ಅಣ್ಣ ನನಗೇ ಸವಾಲು ಹಾಕುತ್ತೀಯಾ? ಘಮ

ಘಮ ಅನ್ನುತ್ತಿರುವ ನಿನ್ನಂತ ಲಾಡುವನ್ನ ಯಾರಾದರೂ ಬಿಡುತ್ತಾರಾ" ಎನ್ನುತ್ತ ಅದನ್ನು ತನ್ನ ಬಾಯಿಯೊಳಗೆ ಹಾಕಿಕೊಂಡು ಮೆಲ್ಲತೊಡಗಿದನು.

ಲಾಡು ತಾನೆ ಸೇರು ಅಂದುಕೊಂಡರೆ, ಹುಡುಗ ಸವ್ವಾಸೇರು! ಏನಂತಿ? *

**ಆಕರ: ಕಲ್ಲು ಸಕ್ಕರೆ,**
**ಸಂಧ್ಯಾ ಮಾಮಿ ಹೇಳಿದ ಕಥೆಗಳು**

**ಆಲೋಚಿಸು:**

* **ಲಾಡುವನ್ನು, ನಿನ್ನ ಗೆಳತಿ/ಗೆಳೆಯರು ನಿನಗೆ ಕೊಡದೆ ತಿನ್ನಬೇಕಾದರೆ ನಿನಗೆ ಏನು ಅನಿಸುತ್ತದೆ!**



# ಅತಿಆಸೆ ಬೇಡ



ರಶ್ಮಿಯ ಮನೆಯ ಮುಂದೆ ಒಂದು ಹೂ ತೋಟವಿತ್ತು. ಅಲ್ಲಿ ಗುಲಾಬಿ, ಸೇವಂತಿಗೆ ಮೊದಲಾದ ಹೂ ಗಿಡಗಳು ಇದ್ದವು. ಆದರೆ ಯಾವ ಗಿಡದಲ್ಲೂ ಹೆಚ್ಚು ಹೂಗಳು ಆಗುತ್ತಿರಲಿಲ್ಲ.

ಒಮ್ಮೆ ರಶ್ಮಿ ಚೆಂಡು ಹೂವಿನ ಗಿಡವನ್ನು ತಂದು ತೋಟದಲ್ಲಿ ನೆಟ್ಟಳು. ಆಗ ಮಳೆಗಾಲ, ಗಿಡವು ಸೊಂಪಾಗಿ ಬೆಳೆಯಿತು. ಎರಡು ತಿಂಗಳುಗಳಲ್ಲೇ ಮೊಗ್ಗುಗಳನ್ನು ಬಿಟ್ಟಿತು. ದಸರಾ ಹಬ್ಬದ ಸಮಯಕ್ಕೆ ಸರಿಯಾಗಿ ಮೊಗ್ಗುಗಳು ಅರಳತೊಡಗಿದವು. ದಿನದಿನಕ್ಕೂ

ದೊಡ್ಡದಾಗಿ ಹಳದಿ ಬಣ್ಣದ ಎಸಳುಗಳು ಹೊರಬಂದವು. ಗಿಡದ ತುಂಬಾ ಹೂವೇ ಹೂವು!

ರಶ್ಮಿ ಗಿಡದ ಬಳಿ ಹೋಗಿ ನಿಂತು ಹೂಗಳನ್ನು ಮುಟ್ಟಿ ನೋಡಿದಳು. ನಾಳೆ ದಸರೆಯ ಮೊದಲ ದಿನ ಈ ಹೂಗಳನ್ನು ಕೊಯ್ದು ದೇವರಿಗೆ ಒಪ್ಪಿಸಬೇಕು, ಮತ್ತು ಗೆಳತಿಯರಿಗೆಲ್ಲಾ ತೋರಿಸಬೇಕು....ಎಂಬುದು ಅವಳ ಆಸೆಯಾಗಿತ್ತು.

ಮರುದಿನ ಬೆಳಗಾಗುತ್ತಲೇ ಹೂ ಬುಟ್ಟಿ ಹಿಡಿದು ರಶ್ಮಿ ತೋಟಕ್ಕೆ ಹೋದಳು. ನಾಲ್ಕಾರು ಚೆಂಡು ಹೂಗಳನ್ನು ಕೊಯ್ದಳು. ಪೂಜೆಗೆ ಒಪ್ಪಿಸಿದಳು. ಸಂಜೆ ಅವುಗಳನ್ನು ಎಲ್ಲ ಗೆಳತಿಯರಿಗೆ, ಬಂದಿರುವ ಅತಿಥಿಗಳಿಗೆ ಹಂಚಿಬಿಟ್ಟಳು.

ಎರಡನೇ ದಿನವೂ ಹಾಗೆಯೇ ಮಾಡಿದಳು. ಮತ್ತೆ ಮೂರನೇ, ನಾಲ್ಕನೇ ಐದನೇ ದಿನಗಳಲ್ಲೂ ಇದೇ ರೀತಿ ಆಯಿತು.

ಚೆಂಡು ಗಿಡದಲ್ಲಿ ಹೂಗಳು ಮುಗಿಯುತ್ತಾ ಬಂದವು. ಅದು ಬೋಳಾಗಿ ನಿಂತು ಅಳುವಂತೆ ಕಾಣುತ್ತಿತ್ತು. ಕೊನೆಯ ನವರಾತ್ರಿ ಮುಗಿದು ವಿಜಯದಶಮಿ ಬಂದಿತು. ಅಂದು ರಶ್ಮಿ ಸಂಭ್ರಮದಿಂದ ಬೆಳಿಗ್ಗೆ ಬೇಗನೆ ಎದ್ದಳು. ಮುಖ ತೊಳೆದು ಹಾಲು ಕುಡಿದು, ಚೆಂಡು ಹೂ ಕೊಯ್ಯಲೆಂದು ಗಿಡದ ಹತ್ತಿರ ಹೋದಳು.

ಗಿಡದಲ್ಲಿ ಎರಡೇ ಎರಡು ಹೂ ಮಾತ್ರ ಉಳಿದಿದ್ದವು. ಒಂದನ್ನು ಕಿತ್ತು ಮತ್ತೊಂದಕ್ಕೆ ರಶ್ಮಿ ಕೈ ಚಾಚುತ್ತಿದ್ದಂತೆ ಗಿಡವು ಜೋರಾಗಿ ಅಲುಗಾಡಿತು. ಒಮ್ಮೆಲೆ ಗದರಿಸಿತು. ದೊಡ್ಡ ಸ್ವರ ತೆಗೆಯಿತು.

“ಎಲೇ ರಶ್ಮೀ!.... ಎಷ್ಟೊಂದು ಆಸೆಬುರುಕಿ ನೀನು!... ನಾನು ನಿನಗಾಗಿ ಅಷ್ಟೆಲ್ಲಾ ಹೂಗಳನ್ನು ಅರಳಿಸಿದೆ, ಅವೆಲ್ಲವನ್ನೂ ನಿನಗೆ ಕೊಟ್ಟೆ ಎಲ್ಲಾ ಹೂಗಳನ್ನೂ ಕಿತ್ತುಕೊಂಡು

ಹೋದೆಂಬುದಾದರೂ ಇನ್ನೂ ಆಸೆ ಮುಗಿದಿಲ್ಲವೇ?..... ಹೀಗೆ ಅತಿ ಆಸೆ ಮಾಡಿದರೆ ಮುಂದೆ ಹೂಗಳೇ ಇರುವುದಿಲ್ಲ, ಗಿಡಗಳೇ ಇಲ್ಲದ ಪರಿಸ್ಥಿತಿ ಬರುವುದು ನೋಡು!... ಹೂಗಳ ಮೇಲೆ ಆಸೆ ಇದೆ. ಆದರೆ ನಿನಗೆ, ಗಿಡಗಳಿಗೆ ನೀರು–ಗೊಬ್ಬರ ಹಾಕಲು ಮನಸ್ಸಿಲ್ಲ. ಎಂಬುದು ನನಗೆ ಗೊತ್ತು.

ಈಗ ನನ್ನ ಬಳಿ ಇರುವ ಈ ಕೊನೆಯ ಹೂವನ್ನು ಕಿತ್ತು ಬಿಟ್ಟರೆ ಮತ್ತೆ ನಿನಗೆ ಚೆಂಡು ಹೂವಿನ ಆಸೆಯೇ ಬೇಡ, ತಿಳಿಯಿತೇ? ಈ ಒಂದು ಹೂ ನನ್ನ ಬಳಿ ಇರಲಿ, ಹೂಗಳು ಗಿಡದಲ್ಲಿದ್ದರೆ ಚಂದ..... ಇನ್ನೂ ಕೆಲವು ದಿನ ಕಳೆದು ಈ ಹೂ ಬಾಡಿದಾಗ ಅದರ ದಳಗಳನ್ನು ತೆಗೆದು ಮಣ್ಣಿನಲ್ಲಿ ಹರಡಿಬಿಡು. ಅದರಿಂದ ಪುಟ್ಟ ಗಿಡಗಳು ಹುಟ್ಟಿ ಮತ್ತೆ ಹೂಗಳನ್ನು ಕೊಡುತ್ತವೆ!...ನಾ ಹೇಳಿದ ಹಾಗೆ ಮಾಡದೆ ಅತಿ

ಆಸೆ ತೋರಿಸಿದರೆ.... ಗಿಡವೂ ಇಲ್ಲ, ಹೂವೂ ಇಲ್ಲ... ತಿಳಿದಿರಲಿ!” ಎಂದು ಎಚ್ಚರಿಕೆ ಕೊಟ್ಟಿತು.

ರಶ್ಮಿ ಗಿಡದ ಮಾತಿಗೆ ಒಪ್ಪಿ ತಲೆದೂಗಿದಳು. ವಿಜಯದಶಮಿ ಮುಗಿದು ಎಂಟು ದಿನಗಳ ಬಳಿಕ ಆ ಒಂದೇ ಒಂದು ಚೆಂಡು ಹೂವಿನ ದಳಗಳನ್ನೆಲ್ಲಾ ತೆಗೆದು ನೆಲದಲ್ಲಿ ಬಿತ್ತಿದಳು. ಅಲ್ಲಿ ಹಲವಾರು ಮೊಳಕೆ ಹುಟ್ಟಿದವು. ಕೆಲವು ದಿನಗಳ ನಂತರದಲ್ಲಿ ಗಿಡಗಳಾದವು.

ಆ ಗಿಡಗಳನ್ನು ಕಿತ್ತು ತೋಟದ ಇಲ್ಲಾ ಕಡೆ ನೆಟ್ಟಳು. ಅವುಗಳು ದೊಡ್ಡದಾಗಿ ಮೊಗ್ಗು ಬಿಟ್ಟು ಹೂ ಅರಳಿದವು. ಲೆಕ್ಕವಿಲ್ಲದಷ್ಟು ಹೂಗಳು!... ಬಣ್ಣ ಬಣ್ಣದ... ಬಣ್ಣದ ಚೆಂಡು ಹೂಗಳು! ರಶ್ಮಿ ಸಂತೋಷದಿಂದ ಕುಣಿದಾಡಿದಳು.

“ಬಣ್ಣದ ಹೂಗಳ ತೋಟವು

ನನ್ನದು...ನೋಡಿರಿ ನೀವೆಲ್ಲಾ....
ಎಂದು ಗೆಳತಿಯರೆದುರು ಹಾಡಿ ತೋರಿಸಿದಳು.

"ಅತಿ ಆಸೆ ಬೇಡ" ಎಂಬ ಬುದ್ಧಿಯ ಮಾತನ್ನು ಅವರಿಗೂ ಹೇಳಿದಳು. *

ಆಕರ: ಎಳೆಯರ ಕಥೆಗಳು–೧,
ಪ್ರಕಟಣೆ: ರಾಜ್ಯ ಶಿಕ್ಷಣ ಸಂಶೋಧನೆ
ಮತ್ತು ತರಬೇತಿ ಇಲಾಖೆ

**ಆಲೋಚಿಸು:**

*** ಗಿಡಗಳಲ್ಲಿ ಒಂದು ಹೂವನ್ನೂ ಬಿಡದೆ ಕಿತ್ತಿದರೆ ಏನಾಗುತ್ತದೆ ಆಲೋಚಿಸು.**



# ವಂಶೋದ್ಧಾರಕ

ಒಂದು ದೊಡ್ಡ ಮರ ಸೊಂಪಾಗಿ ಬೆಳೆದು ನಿಂತಿತ್ತು. ಅದರಲ್ಲಿ ಲೆಕ್ಕವಿಲ್ಲದಷ್ಟು ಹೀಚು, ಕಾಯಿ, ಹಣ್ಣು ಬಿಟ್ಟಿತ್ತು. ಅದು ರುಚಿಯಾದ ಹಣ್ಣು. ಸದಾ ಒಂದಲ್ಲ ಒಂದು ಪಕ್ಷಿ ಹಾರುತ್ತಾ ಬಂದು ಮರದ ಮೇಲೆ ಅಲ್ಲಿ ಕೂತು ಇಲ್ಲಿ ಕೂತು ಕೂತು ಹೊಟ್ಟೆ ತುಂಬಾ ತಿಂದು ಡರ್ ಅಂತ ತೇಗುತ್ತಾ ಪುರ್ ಅಂತ ಹಾರಿ ಹೋಗ್ತಾ ಇತ್ತು. ದಿನಬೆಳಗಾದ್ರೆ ಇದನ್ನೇ ನೋಡಿ ನೋಡಿ ಬೇಸತ್ತ ಮರ, 'ನಾನು ಭೂಮಿಯಿಂದ

ನೀರು ಹೀರಿ, ಸುಡೋ ಸೂರ್ಯನಿಂದ ಶಕ್ತಿ ಪಡೆದು ಮೊಗ್ಗಾಗಿ ಹೂವಾಗಿ ಹೀಚಾಗಿ, ಕಾಯಾಗಿ ಹಣ್ಣಾಗಿ ಮಾಡ್ತೀನಿ.

ಇದರಲ್ಲಿ ನನ್ನ ಶ್ರಮ ಎಷ್ಟಿದೆ ಅನ್ನೋದು, ಎಲ್ಲಿಂದಲೋ ಪುರ್ ಅಂತ ಹಾರಿ ಬಂದು ಸರ್ ಅಂತ ಹಣ್ಣು ತಿಂದು ಹೊಟ್ಟೆ ತುಂಬಿ ಡರ್ ಅಂತಾ ತೇಗ್ತಾ ಹಾರೋಗುತ್ತಲ್ಲಾ, ಅವಕ್ಕೆ ನನ್ನ ಒಂದು ಮಾತು ಕೇಳಬೇಕು ಅಂತ ಅನಿಸಲ್ವ. ಏನೋ ತಾವೇ ಬೆಳೆಸಿ ಉಳಿಸಿದಂಗೆ ಜಂ ಅಂತ ತಿಂದು ಹೋಗ್ತವೆ' ಅಂತ ಕೋಪದಿಂದ ಹೇಳಿ ಆಕಾಶದ ಕಡೆ ನೋಡ್ತು.

ಅದೇ ಸಮಯಕ್ಕೆ ಮರದ ಮೇಲೆ ಕೂತು ಹೊಟ್ಟೆ ತುಂಬಾ ಹಣ್ಣು ತಿಂದು ಮರದಿಂದ ಹಾರಿದ ಒಂದು ಪಕ್ಷಿಗೆ ಇದು ಗೊತ್ತಾಯಿತು. ಅದು ಮರ ತನ್ನನ್ನು ಪ್ರಶ್ನೆ

ಮಾಡ್ತೀದೆ ಅನ್ಕೊಂಡು ಮತ್ತೆ ಮರದ ಮೇಲೆ ಕೂತ್ಕೊಂಡಿತು. ಆಗ ಮರ, 'ಅಬ್ಬಾ ಇದರ ಹೊಟ್ಟೆ ಏನು ಕನ್ನಂಬಾಡಿ ಕಟ್ಟೇನಾ? ಈಗ ತಾನೆ ಎರಡು ಹಣ್ಣು ತಿಂತು' ಅಂದುಕೊಂಡಿತು.

'ಇಲ್ಲ... ಇಲ್ಲ... ನಾನು ಮತ್ತೆ ಹಣ್ಣು ತಿನ್ನಕ್ಕೆ ಬರಲಿಲ್ಲ. ನಿನ್ನ ಪ್ರಶ್ನೆಗೆ ಉತ್ತರ ಕೊಡೋಣ ಅಂತ ಬಂದೆ' ಎಂದಿತು. ಮರಕ್ಕೆ ಎಲ್ಲಿಲ್ಲದ ಆಶ್ಚರ್ಯ.

'ಎಲ್ಲಿ ನಿನ್ನ ಮೇಲಿನ ಕೊಂಬೆಯನ್ನು ಕೊಂಚ ಉದ್ದ ಮಾಡಿ ಸುತ್ತ–ಮುತ್ತ ಕಣ್ಣಾಡಿಸು ಏನಾದರೂ ವಿಶೇಷ ಇದೆಯಾ?' ಎಂದಿತು ಪಕ್ಷಿ. ಹಾಗೆ ನೋಡಿದ ಮರ, 'ಇಲ್ಲ ಅಂತಾದ್ದೇನೂ ವಿಶೇಷ ಇಲ್ಲ' ಎಂದಿತು.

'ಹೋಗಲೀ ನಿನ್ನ ಜಾತಿಯದ್ದೇ ಮರ ನಿನಗೆ ಕಾಣಸ್ತಾ ದೂರ ದೂರ... ಸರಿಯಾಗಿ ದೃಷ್ಟಿ ಹರಿಸಿ ನೋಡು' ಅಂತು ಹಕ್ಕಿ ಈಗ

ಕೊಂಬೆ ಉದ್ದಾ ಮಾಡ್ಕೊಂಡು ನೋಡಿದ ಮರ ಎಣಿಸೋದಕ್ಕೆ ಶುರು ಮಾಡಿ ಕೂಗಿತು, 'ಹಾಂ..... ಒಂದು, ಎರಡು.....ಹತ್ತು, ಇಪ್ಪತ್ತು.....ಅಬ್ಬಬ್ಬ ಎಣಿಸೋದಕ್ಕೆ ಆಗಲ್ಲ ಬೇಕಾದಷ್ಟಿವೆ' ಅಂತ ಒಂದೇ ಉಸುರಿಗೆ ಹೇಳಿತು. 'ಥೇಟ್ ಎಲ್ಲಾ ನನ್ನ ತರಾನೆ ಇವೆ' ಅಂತಾನೂ ಹೇಳ್ತು. 'ಅವನ್ನೆಲ್ಲಾ ಹುಟ್ಟಾಕಿದ್ದು ಯಾರು ನೀನಾ?' ಎಂದಿತು ಹಕ್ಕಿ.

ಹಕ್ಕಿಯ ಪ್ರಶ್ನೆಗೆ ಮರದ ಉತ್ತರ ಮೌನವಾಗಿತ್ತು. ತಕ್ಷಣ ಪಕ್ಷಿ, 'ಅದನ್ನೆಲ್ಲ ಬೆಳೆಸಿದ್ದು ನಾನು' ಎಂದಿತು. ಪಕ್ಷಿಯ ಮಾತಿಗೆ ಮರ ತನ್ನ ರೆಂಬೆ ಕೊಂಬೆಗಳನ್ನೆಲ್ಲಾ ಬಳಕಿಸುತ್ತಾ 'ನೀನಾ' ಎಂದು 'ಕಿಸಕ್' ಎಂತ ನಕ್ಕಿತು.

ಪಕ್ಷಿ ಕೊಂಚ ಸುಮ್ಮನಿದ್ದು, 'ಆಯ್ತಾ ನಿನ್ನ ನಗು. ಈಗ ನನ್ನ ಮಾತು ಒಂದಿಷ್ಟು ಕೇಳು.

ನಾವು ಮನುಷ್ಯರ ಹಾಗೆ ಸ್ವಾರ್ಥಿಗಳಲ್ಲ! ನೆರಳು ಕೊಟ್ಟು ನಮಗೆ ಗೂಡು ಕಟ್ಕೋಕೆ ಜಾಗ ಕೊಟ್ಟು ಹೂವು, ಹಣ್ಣು ಕೊಟ್ಟ ನಿನ್ನನ್ನು ನಾಶ ಮಾಡೋ ಬುದ್ಧಿ ನಮಗಿಲ್ಲ. ನಾನು ನಿನ್ನ ವಂಶ ಬೆಳಸ್ತೀನಿ' ಅಂತು. ಮರ ಮತ್ತೆ 'ಕಿಸಕ್' ಅಂತ ನಕ್ಕಿತು.

'ನಗಬೇಡ, ನನ್ನ ಮಾತು ನಿಜ. ನಿನ್ನ ಮರದಲ್ಲಿ ಬೆಳೆದ ಹಣ್ಣುಗಳನ್ನು ನಿನ್ನ ಕೇಳದೆ ತಿಂತೀನಿ ನಿಜ. ತಿಂದು ನಿನಗೆ ಥ್ಯಾಂಕ್ಸ್ ಕೂಡ ಹೇಳದೆ ಪುರ್ ಅಂತ ಹಾರೋಗ್ತೀನಿ ಅದೂ ನಿಜ. ಆದರೆ ಅಲ್ಲಿ ಇಲ್ಲಿ ಹತ್ತಾರು ಮೈಲಿ ದೂರ ಹಾರೋ ನಾನು ಅಲ್ಲಿ ಇಲ್ಲಿ ಕೂತಾಗ ಹಿಕ್ಕೆ ಹಾಕ್ತೀನಿ. ನಾನು ತಿಂದ ನಿನ್ನ ಮರದ ಹಣ್ಣಿನ ಬೀಜ ಹಿಕ್ಕೇ ಸಮೇತ ಮಣ್ಣಲ್ಲಿ ಸೇರುತ್ತೆ. ಮಳೆ ಬಂದಾಗ ಆ ಬೀಜ ಮೊಳಕೆ ಒಡೆಯುತ್ತೆ. ಆಮೇಲೆ ಸಸಿ ಆಗಿ, ಮರವಾಗಿ ಬೆಳೆದು ಕಾಲ

ಆಗ್ತಿದ್ದಂಗೆ ನಿನ್ನಂತದ್ದೇ ಮರ ಆಗುತ್ತೆ. ತಿಳೀತಾ? ಈಗ ಹೇಳು ನಾನು ಸ್ವಾರ್ಥೀನಾ? ನನ್ನಿಂದ ತಪ್ಪಾಯಿತಾ?' ಅಂತ ಕೇಳಿತು ಹಕ್ಕಿ.

'ಇಲ್ಲ ಇಲ್ಲ ನಿನ್ನಿಂದಾ ಏನೂ ತಪ್ಪಾಗಿಲ್ಲ. ತಪ್ಪು ನಂದೇ. ನೀವು ನನ್ನ ಅಪ್ಪಣೆ ಕೇಳದೆ ನನ್ನ ಮರದ ಹಣ್ಣು ತಿಂತೀರಾ. ನನ್ನ ಮೇಲೆ ಗೂಡು ಕಟ್ಟಿ ವಾಸ ಮಾಡ್ತೀರಾ, ಇದಕ್ಕೆ ಪ್ರತಿಫಲವಾಗಿ ನೀನು ನನ್ನ ಸಂತತಿ ಬೆಳಸ್ತೀದ್ದೀರಾ ಅಂದ್ರೆ ನೀವುಗಳು ನನ್ನ ವಂಶೋದ್ಧಾರಕರು. ನಿಮಗೆಲ್ಲಾ ನನ್ನ ನಮಸ್ಕಾರ' ಅಂದಿತು.

ಆಗ ಪಕ್ಷಿ ಹಾರಲು ಅನುವಾಯಿತು. ಕೂಡಲೇ ಮರ 'ಏ ಬಾ ಇಲ್ಲಿ, ಅಲ್ಲಿ ನೋಡು ಅಲ್ಲಿ ತುದೀಲಿ ಒಂದು ಹಣ್ಣು ಇದೆ ತಿಂದು ಹೋಗು' ಎಂದಿತು.

'ಬೇಡ ನಂಗೆ ಈಗ ಹೊಟ್ಟೆ ತುಂಬಿದೆ.

ಬೇರೆ ಒಂದು ಪಕ್ಷಿ ಎಲ್ಲಿಂದಲೋ ಬಂದು ಇನ್ನೆಲ್ಲಿಗೋ ಹೋಗೋವಾಗ ಮರದ ಹಣ್ಣು ತಿಂದು ಹೋಗುತ್ತೆ. ಅವು ಹೋದ ಕಡೆ ನಿನ್ನ ಸಂತತಿ ಬೆಳೆಸುತ್ತೆವೆ' ಅಂತ ಹೇಳಿ ಹಾರಿ ಹೋಯಿತು ಪಕ್ಷಿ. ರೆಂಬೆ–ಕೊಂಬೆ ಅಲ್ಲಾಡಿಸಿತು ಮರ ಸಂತೋಷದಿಂದ. *

**ಆಕರ: ಸುಧಾ ವಾರಪತ್ರಿಕೆ 2015**

**ಲೇಖಕರು: ಜಿ.ಬಿ. ಕೋಟೆ ಅನಂತ್, ಬೆಂಗಳೂರು**

**ಆಲೋಚಿಸು:**

* **ಹಣ್ಣನ್ನು ಕೊಟ್ಟ ಮರಕ್ಕೆ, ಹಕ್ಕಿಯು ಧನ್ಯವಾದಗಳನ್ನು ತಿಳಿಸುವುದರ ಬಗ್ಗೆ ನಿನ್ನ ಅನಿಸಿಕೆ ಏನು?**

# *THE FRUITS AND VEGETABLES*



One day, all of the vegetables in the kitchen[1] decided to have a meeting. Patrick the pumpkin[2], Eddie the eggplant, Tom the tiny turnip, and Oliver the olive all showed up.

They wanted to talk about how they think the fruits are taking all of the attention in the kitchen.

**ಹೊಸಪದಗಳು**

1. **kitchen** (ಕಿಚನ್) – **ಅಡುಗೆಮನೆ**
2. **pumpkin** (ಪಂಪ್ಕಿನ್) – **ಕುಂಬಳಕಾಯಿ**

"No one likes us vegetables[3]", complained Tom. So they all decided[4] it was time for a change.

Meanwhile, the fruits decided to have a meeting[5] of their own. Walter the watermelon, Paul the peach, Stu the strawberry, and Barry the banana all showed up.

They decided that the vegetables were getting all of the attention because they have more nutritional value. They all decided to confront the vegetables.

So the vegetable crew and

**ಹೊಸಪದಗಳು**

3. **vegetable** (ವೆಜಿಟೆಬಲ್) – **ತರಕಾರಿ**

4. **decide** (ಡಿಸೈಡ್) – **ನಿರ್ಧರಿಸು**

5. **meet** (ಮೀಟ್) – **ಸೇರು/ಭೇಟಿ ಮಾಡು**

fruit crew met up on the kitchen counter to express[6] their concerns[7].

Patrick and Walter were chosen to be the leaders because they're both the biggest.

Patrick argued, "You fruits are colorful, sweet, and everyone likes you better!"

Walter argued back, "No, everyone likes you because you're full of vitamins and nutritional value!"

After they argued back and forth, Tommy the can of tomatoes

**ಹೊಸಪದಗಳು**

6. **express** (ಎಕ್ಸ್‌ಪ್ರೆಸ್) – **ಅಭಿವ್ಯಕ್ತಿಸು**

7. **concern** (ಕನ್ಸರ್ನ್) – **ಕಾಳಜಿ**

showed up.

"Stop arguing! Everyone likes fruits AND vegetables! You both have nutritional value and can work great together to make yummy meals[8]! In the end, we're ALL produce[9]."

They both agreed[10] and decided to stop fighting. Now, the only thing they should be fighting is sweets! *

**ಆಕರ: ಅಂತರ್ಜಾಲ**

**ಹೊಸಪದಗಳು**

**8. meal** (ಮೀಲ್) – **ಊಟ**

**9. produce** (ಪ್ರಡ್ಯೂಸ್) – **ತಯಾರಿಸು/ಸಿದ್ಧಪಡಿಸು**

**10. agree** (ಅಗ್ರೀ) – **ಒಪ್ಪು**

**ನಮ್ಮ ಮಹದಾಶಯ**

ಕಥಾಮಂಟಪದಲ್ಲಿನ ಕಥೆಗಳನ್ನು ಓದಿ ನಿಮಗೆ ತುಂಬಾ ಖುಷಿಯಾಗುತ್ತಿದೆ, ಅಲ್ಲವೆ? ಆಯಾ ಕಥೆಗಳ ಕೊನೆಯಲ್ಲಿ ಕಥೆಗಳ ಆಕರಗಳನ್ನೂ ಕೊಡಲಾಗಿರುತ್ತದೆ. ಆ ಪುಸ್ತಕಗಳನ್ನು ಕೊಂಡು / ಗ್ರಂಥಾಲಯದಿಂದ ಎರವಲು ಪಡೆದು ಇನ್ನೂ ಹೆಚ್ಚಿನ ಕಥೆಗಳನ್ನು ಓದಿ ಆನಂದಿಸಲು ಸಾಧ್ಯವಾಗಲಿ ಎಂಬ ಮಹದಾಶಯ ನಮ್ಮದು.


**ಸಂಪರ್ಕ ಮಾಹಿತಿ:**

**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**

**# 76,'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,**

**ಶಿವಗಿರಿ, ಧಾರವಾಡ 580 007**

**ಮೊ: 99866 61055**

**dhwanitrust@gmail.com**
**www. dhwanitrust.org**



ಗಮನಿಸಿ:

ಈ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ಪ್ರಕಟಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ಪುನರ್ಮುದ್ರಿಸುವುದಾಗಲೀ ಬಳಸಿಕೊಳ್ಳುವುದಾಗಲೀ ನಿಷಿದ್ಧ.